ಇ) ಕರ್ನಾಟಕ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿಗಳ ಪಿ. ಯು. ಸಿ. ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ವಿಂಗಡಿಸಿ ಫಲಿತಾಂಶವನ್ನು ಪ್ರಕಟಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಅಂತಹ ಯಾವ ವಿಷಯವೂ ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಪಟ್ಟಿಯನ್ನು ಲಗತ್ತಿಸಿದೆ.

ಇ) ಪದವಿ ಪೂರ್ವ ಪರೀಕ್ಷೆಯ ಫಲಿತಾಂಶಗಳನ್ನು ರಾಜ್ಯಕ್ಕೆಲ್ಲಾ ಒಟ್ಟಿಗೆ ಪ್ರಕಟಿಸಲಾಗುವುದು. ರಾಜ್ಯದ ಯಾವುದಾದರೂ ಒಂದು ಭಾಗಕ್ಕೆ ಪ್ರಕಟಿಸಲಾಗುವುದಿಲ್ಲ.

ಕೆಂಚನೂರು ಗ್ರಾಮದ ಜಾಡಿ ಹೊಳೆಗೆ ಅಣೆಕಟ್ಟು ಕಟ್ಟಿಸುವ ಬಗ್ಗೆ

೧೨೩. (೫೬) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಲೋಕೋಪಯೋಗಿ, ಆಚ್ಚು ಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬೈಂದೂರು ಕ್ಷೇತ್ರದ ಕೆಂಚನೂರು ಗ್ರಾಮದ ಜಾಡಿ ಹೊಳೆಗೆ ತೂಬು ಅಣೆಕಟ್ಟು ಕಟ್ಟಿಸುವುದರಿಂದಾಗಿ ನೂರಾರು ಎಕರೆ ಜಮೀನಿನಲ್ಲಿ ಕೃಷಿ ಮಾಡಲು ಅನುಕೂಲವಾಗಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಅಣೆಕಟ್ಟನ್ನು ನಿರ್ಮಿಸಲು ಯಾವ ಕ್ರಮ ಕೈ ಕೊಳ್ಳಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಅನ್ವೇಷಣೆ ಮುಗಿದನಂತರ, ಯೋಜನೆಯು ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಸೂಕ್ತವೆಂದು ಕಂಡು ಬಂದರೆ, ಆವಶ್ಯಕ ಕ್ರಮ ಕೈಗೊಳ್ಳಲಾಗುವುದು.

ಶಹಾಪುರ ತಾಲ್ಲೂಕಿನಲ್ಲಿರುವ ಏತ ನೀರಾವರಿ ಯೋಜನೆಗಳ ಬಗ್ಗೆ

೧೨೪ (೩೧೭) ಶ್ರೀ ಶಿವಶೇಖರಪ್ಪ ಶಿರವಾಳ (ಶಹಾಪುರ).—ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗುಲ್ಬರ್ಗ ಜಿಲ್ಲೆ ಶಹಾಪುರ ತಾಲ್ಲೂಕಿನಲ್ಲಿರುವ ಏತ ನೀರಾವರಿಗಳಾವುವು ?

ಆ) ಏತ ನೀರಾವರಿ ಯೋಜನೆಗಳಿಗೆ ವಿದ್ಯುತ್ ಒದಗಿಸಲಾಗಿದೆಯೇ ?

ಇ) ಹಾಗಿದ್ದಲ್ಲಿ, ಶಹಾಪುರ ತಾಲ್ಲೂಕಿನ ಐಕೂರ ಹಾಗೂ ಅಂಕ್‌ಸೂಗೂರು ಗ್ರಾಮಗಳಲ್ಲಿನ ಏತ ನೀರಾವರಿ ಯೋಜನೆಗಳ ಕೆಳಗೆ ಬರತಕ್ಕ ಜಮೀನಿನ ಪೈಕಿ ಎಷ್ಟು ಎಕರೆ ಜಮೀನು ನೀರಾವರಿಯಾಗಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ೯.

೧) ಗುಲಸರಾಮ್ ೨) ಸಿರ್‌ವಾಲ್ ೩) ಗೋಧಿಹಾಳ್ ೪) ಅಂಕಸಗೂರು ೫) ಕಂಡಹಳ್ಳಿ ೬) ಚಟ್ನಹಳ್ಳಿ ೭) ಐಕೂರು ೮) ಕೋಡಲ್ ೯) ದರ್ಶನಾಪುರ್.

ಆ) ಕೋಡಲ್ ಏತ ನೀರಾವರಿಯ ಹೊರತು ಉಳಿದ ಎಂಟು ಯೋಜನೆಗಳಿಗೆ ವಿದ್ಯುತ್ ಸರಬರಾಜು ಒದಗಿಸಲಾಗಿದೆ.

ಇ) ಇದುವರೆವಿಗೂ ಯಾವ ಜಮೀನು ನೀರಾವರಿಗೆ ಒಳಪಟ್ಟಿಲ್ಲ.